# ಪುಟ್ಟಿಯ ದೀಪಾವಳಿ

■ ನಾಗೇಶ ಜಿ. ವೈದ್ಯ
ಕಲೆ: ಸಂತೋಷ್ ಸಸಿಹಿತ್ಲು

ಪುಟ್ಟಿಗೆ ದೀಪದ
ಹಬ್ಬವು ಬಂದರೆ
ಎಲ್ಲಿಲ್ಲದ ಹಿಗ್ಗು
ಅಂಗಳ, ಅಟ್ಟದ
ಮೂಲೆಯ ಗುಡಿಸಿ
ಮನೆಯೆಲ್ಲಾ ಮೆರುಗು
ಮಕ್ಕಳಿಗೆಲ್ಲ
ಹೊಸ, ಹೊಸ ಬಟ್ಟೆ
ಅಮ್ಮಗೆ ಜರತಾರಿ
ಡಬ್ಬದ ತುಂಬಾ
ಸಿಹಿ, ಸಿಹಿ ತಿನಿಸು
ವಾರದ ಮೊದಲೇ ತಯಾರಿ
ಬಿದಿರಿನ ಕಡ್ಡಿ
ಬಣ್ಣದ ಕಾಗದ
ತಯಾರು ಆಕಾಶಬುಟ್ಟಿ
ಅಣ್ಣನು ಅದನು
ನಭಕೆ ಏರಿಸಲು
ಕಂಡು ನಲಿದಳು ಪುಟ್ಟಿ
ಸಂಜೆಯ ಹೊತ್ತಿಗೆ
ನೆಂಟರು, ಗೆಳೆಯರು
ಗಿಜಿಬಿಜಿ ಮನೆತುಂಬಾ
ನಲಿದರು ಮಕ್ಕಳು
ಹಣತೆಯ ಹಚ್ಚಿ,
ಮಿಠಾಯಿ ಹೊಟ್ಟೆತುಂಬಾ



## ಕುಂಚ ಪ್ರಪಂಚ



**ನೇಹಾ ಎಸ್.**
5ನೇ ತರಗತಿ,
ಕುವೆಂಪು ಶತಮಾನೋತ್ಸವ ಮಾದರಿ
ಪ್ರಾಥಮಿಕ ಶಾಲೆ ತೆಕ್ಕಟ್ಟೆ. ಕುಂದಾಪುರ





**ರಿಷಭ್ ಹಿರೇಮಠ**
5ನೇ ತರಗತಿ,
ಬಿ.ಜಿ.ಎಸ್ ಸ್ಕೂಲ್, ಬೆಂಗಳೂರು







**ಸ್ಫೂರ್ತಿ ವಿ.ಹೆಬ್ಬಾಳ್**
4ನೇ ತರಗತಿ,
ಅಮಿತ್ ಪಾಟೀಲ್
ಸೆಂಟ್ರಲ್ ಸ್ಕೂಲ್
ಕಲಬುರಗಿ